# ಗ್ರಂಥಾಲಯದಲ್ಲಿ ಬೆಳಗಿದ ಜ್ಞಾನಜ್ಯೋತಿ



ವ್ಯಕ್ತಿ

ಪ್ರೊ. ಕೆ.ಎಸ್. ದೇಶಪಾಂಡೆ

ಕರ್ನಾಟಕದಲ್ಲಿ ಗ್ರಂಥಾಲಯ ಪಿತಾಮಹ ಎಂದೇ ಖ್ಯಾತರಾದ ಪ್ರೊ. ಎಸ್.ಆರ್. ರಂಗನಾಥನ್ ಅವರನ್ನು ಹೊರತುಪಡಿಸಿದರೆ ಅವರ ಮಟ್ಟಕ್ಕೆ ಏರಬಲ್ಲ ಏಕಮಾತ್ರ ವ್ಯಕ್ತಿ ಪ್ರೊ. ಕೆ.ಎಸ್. ದೇಶಪಾಂಡೆ.

ಅದು ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ. ನಾನು ನನ್ನ ಕುರ್ಚಿಯಲ್ಲಿ ಕುಳಿತುಕೊಂಡು ತಲೆ ಬಗ್ಗಿಸಿಕೊಂಡು ನನಗೆ ಬಂದಿದ್ದ ಪತ್ರವೊಂದನ್ನು ಓದುತ್ತಿದ್ದೆ. ಪತ್ರ ಓದಿದ ಬಳಿಕ ತಲೆ ಎತ್ತಿ ನೋಡಿದೆ...

ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ನನ್ನ ಎದುರಿಗೆ ಕುಳಿತವರು ಮತ್ತಾರೂ ಅಲ್ಲ. ಭಾರತದ ಮೊದಲ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಸರ್. ಸಿ.ವಿ. ರಾಮನ್!

ತಕ್ಷಣ ತಪ್ಪಿನ ಅರಿವಾಗಿ ಎದ್ದು ನಮಸ್ಕರಿಸಿದೆ. ಜತೆಗೆ ಪತ್ರದಲ್ಲಿ ಮಗ್ನವಾಗಿ ನೋಡದ್ದಕ್ಕೆ ಕ್ಷಮಾಪಣೆ ಕೇಳಿದೆ.

It's ok, young man; I can understand. It must be a love letter.

ಸರ್. ಸಿ.ವಿ. ರಾಮನ್ ನಗೆಚಟಾಕಿ ಹಾರಿಸಿದರು.

ಏನು ಸಹಾಯ ಮಾಡಲಿ ಎಂದು ಕೇಳಿದೆ.

'ರಾಮನ್ ಎಫೆಕ್ಟ್ ಬಗ್ಗೆ ಅಮೆರಿಕದ ನಿಯತಕಾಲಿಕೆ ಒಂದರಲ್ಲಿ ವ್ಯತಿರಿಕ್ತ ವರದಿಯೊಂದು ಬಂದಿದೆಯಂತೆ. ಅದಕ್ಕೆ ಪ್ರತಿಕ್ರಿಯೆ ನೀಡಬೇಕಿದೆ. ಆ ನಿಯತಕಾಲಿಕೆ ದೊರಕಿಸಿಕೊಳ್ಳಲು ಬೆಂಗಳೂರಿನ ಬ್ರಿಟಿಷ್ ಲೈಬ್ರರಿ ಸೇರಿದಂತೆ ನಾಲ್ಕೈದು ಕಡೆಗಳಲ್ಲಿ ಅಲೆದೆ. ಕೊನೆಗೆ ಯಾರೋ ನಿಮ್ಮ ಬಳಿ ಸಿಕ್ಕುತ್ತದೆ ಎಂದರು. ದಯವಿಟ್ಟು ಅದು ಸಿಕ್ಕಬಹುದೇ' ಎಂದು ರಾಮನ್ ಪ್ರಶ್ನಿಸಿದರು.

'ಎರಡು ನಿಮಿಷ ಕುಳಿತುಕೊಳ್ಳಿ' ಎಂದು ಹೇಳಿ ನಾನು ಎದ್ದು ಹೊರಟೆ.

ಎಲ್ಲಿಗೆ ಹೊರಟಿರಿ? ರಾಮನ್ ಪ್ರಶ್ನಿಸಿದರು.

'ಅದು ಮೇಲಿನ ಮಹಡಿಯಲ್ಲಿದೆ. ನಾನು ತರುತ್ತೇನೆ. ನೀವು ಕುಳಿತುಕೊಳ್ಳಿ' ನಾನೆಂದೆ.

'ನಾನೂ ಬರುತ್ತೇನೆ' ಎಂದರು ರಾಮನ್.

'ಮೇಲೆ ಹೋಗಲು 40 ಮೆಟ್ಟಿಲುಗಳಿವೆ. ನೀವು ಕುಳಿತುಕೊಳ್ಳಿ' ಎಂದೆ ಸೌಜನ್ಯದಿಂದ.

'ಬಂದೆ' ಎನ್ನುತ್ತ ವಯೋವೃದ್ಧ ರಾಮನ್ ಎದ್ದೇ ಬಿಟ್ಟರು. ನನ್ನಷ್ಟೇ ವೇಗದಲ್ಲಿ 40 ಮೆಟ್ಟಿಲುಗಳನ್ನು ಸಲೀಸಾಗಿ ಏರಿದರು.

ನಾನು ಅವರ ಕೈಗೆ ಅಮೆರಿಕದ ಆ ನಿಯತಕಾಲಿಕೆಯನ್ನು ಕೊಟ್ಟಾಗ ಥ್ಯಾಂಕ್ಸ್ ಎಂದರು.

I wish I had a camera. I could have clicked that rare moment... ಎಂದುಕೊಂಡೆ.

***